PSK F9

ದಿನಾಂಕ 18-11-1994 ರಂದು ಡೀಡ್ಸ್ ಗಾಳಿ ಪ್ರೊಜೆಕ್ಟ ಯಲ್ಲಾಪುರದಲ್ಲಿ ನಡೆದ ಉತ್ತರ ಕನ್ನಡ ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತ ಅರಣ್ಯ ಯೋಜನೆ ಬಗೆಗಿನ ಸಭೆಯ ವರದಿ ಹಾಗೂ ನಡವಳಿಕೆಗಳು.

---

## ಸಭೆಯಲ್ಲಿ ಹಾಜರಿದ್ದ ಸದಸ್ಯರು

1. ರಾಜಗೋಪಾಲ ಶೆಟ್ಟಿ, ಡೀಡ್ಸ್.
2. ಗಣೇಶ ಶೆಟ್ಟಿ, ಹಿಂದುಳಿದ ಗುಡ್ಡಗಾಡು ಜನರ ವಿಕಾಸ ಸಂಘ ಕುಂಟಗಣಿ.
3. ರಮೇಶ ವಾಸುದೇವ, ಅಧ್ಯಕ್ಷರು ವಿ.ಎಫ್.ಸಿ. ಬೆಳಗೇರಿ.
4. ಶಶಿಕಲಾ ನಾಯಕ, ಪ್ರಗತಿ ವನಿತಾ ಸಮಾಜ ಅಂಕೋಲಾ.
5. ಪಾಂಡುರಂಗ ಹೆಗಡೆ, ಪರಿಸರ ಸಂಘಟನೆ ಸಿರ್ಸಿ.
6. ಶಿವಪ್ಪ ಪೂಜಾರಿ, ಸಿದ್ಧಿ ಪ್ರೊಜೆಕ್ಟ ಯಲ್ಲಾಪುರ.
7. ಶೀಲಾ ಖರೆ, ವಿಕಾಸ ಸಂಸ್ಥೆ ಮಳಗಿ,
8. ಪ್ರತಿಭಾ ಮುಂಡರಗಿ, ಐ.ಡಿ. ಎಸ್. ಹಳಿಯಾಳ.
9. ಜೋಸೆಫ ಮಾಜಿ, ಕೆ.ಡಿ.ಡಿ.ಸಿ. ಕುಮಟಾ.
10. ಅಪಾ ಬೇಳೂರಕರ, ಕೆ.ಆರ್.ಡಬ್ಲ್ಯೂ.ಸಿ.ಡಿ.ಎಸ್. ಕಾರವಾರ.
11. ಶ್ರೀ ಗೋಪಿಕೃಷ್ಣ, ಆಕ್ಸಫಾಮ ಹೈದ್ರಾಬಾದ.
12. ವಿದ್ಯಾಧರ ಗಾಡ್ಗೀಳ, ಆಕ್ಸಫಾಮ ಸಿರ್ಸಿ.
13 ಡಿಯೋಗ ಬಸ್ತ್ಯಾಂವ ಸಿದ್ಧಿ ಪ್ರೊಜೆಕ್ಟ ಯಲ್ಲಾಪುರ.
14. ಸಾವಿತ್ರಿ ಬಾಂದೇಕರ, ಡೀಡ್ಸ ಗಾಳಿ ಪ್ರೊಜೆಕ್ಟ ಯಲ್ಲಾಪುರ.
15. ನಾಗು ಜನ್ನು ತೋರತೆ, ಅಧ್ಯಕ್ಷರು ವಿ.ಎಫ್.ಸಿ. ಉಡಗೇರಿ.
16. ಬಾಬು ಪೋಂಡೆ, ಡೀಡ್ಸ ಗಾಳಿ ಪ್ರೊಜೆಕ್ಟ ಯಲ್ಲಾಪುರ.

## ಚರ್ಚಿಸಿದ ವಿಷಯಗಳು

1. ಜಂಟಿ ಅರಣ್ಯ ಯೋಜನೆ ಉತ್ತರ ಕನ್ನಡ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಅನುಬಂಧ.
2. ಕೆ.ಎಫ್.ಡಿ.ಸಿ. ಗೆ ಕೆ.ಎಫ್.ಡಿ. ಯಿಂದ ಅರಣ್ಯ ಮಂಜೂರಿ ಮಾಹಿತಿಗಳು.
3. ವಿ.ಎಫ್.ಸಿ. ಸದಸ್ಯರಿಂದ ಅನುಭವ ಹಂಚಿಕೆ.
4. ವಿ.ಎಫ್.ಸಿ. ಯನ್ನು ಬಲಗೊಳಿಸುವ ವಿಚಾರಗಳು.
5. ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ತರಬೇತಿಯ ಅವಶ್ಯಕತೆ.
6. ವಿಭಾಗ ಮಟ್ಟದ ಅರಣ್ಯಾಧಿಕಾರಿಗಳು ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು ಮತ್ತು ವಿ.ಎಫ್.ಸಿ. ಸಮಿತಿಯ ಮೀಟಿಂಗ ಕರೆಯುವುದು.
7. ವಿ.ಎಫ್.ಸಿ. ಮೈಕ್ರೋಪ್ಲಾನಿಂಗ.
8. ಕೆನರಾ ಸರ್ಕಲನ ಕನ್ಸರ್ವೇಟಿವ ಭೇಟಿ.
9. ಕಳೆದ ಸಭೆಯ ವರದಿ ಕಳಿಸುವ ಬಗ್ಗೆ.

10· ಗಿರಿ ಜನಾಂಗಕ್ಕೆ ಕಿರು ಅರಣ್ಯ ಉತ್ಪನ್ನಗಳ ಹಕ್ಕಿನ ಬಗ್ಗೆ·

11· ಎಗ್ಜಿಬ್ಯುಶನ ಬಗ್ಗೆ·

12· ರಿವ್ಯೂ ಮಿಶನಿನ ಭೇಟಿ·

ಉತ್ತರ ಕನ್ನಡ ಜಿಲ್ಲೆಯಲ್ಲಿ ಜಂಟಿ ಅರಣ್ಯ ಯೋಜನೆ ಜಾರಿಗೊಂಡದಿನಿಂದ ಈ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟವು ಸ್ಥಾಪಿತಗೊಂಡಿದ್ದು, ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ಸೇರಿ ಈ ಯೋಜನೆಯ ಯಶಸ್ವಿ ಬಗ್ಗೆ ಚರ್ಚಿಸಲಾಗುತ್ತದೆ· ಮೊದಲಿನ ಸಭೆಯಲ್ಲಿ ತೀರ್ಮಾನಿಸಿದಂತೆ ತಾರೀಖು 18–11–94 ರಂದು 10–30ಕ್ಕೆ ಡೀಡ್ಸ್ ಗಾಳಿ ಪ್ರೊಜೆಕ್ಟನಲ್ಲಿ ಸಭೆ ಸೇರಿ ಶ್ರೀಮತಿ ಪ್ರತಿಭಾ ಮುಂಡರಗಿಯವರ ಅಧ್ಯಕ್ಷತೆಯಲ್ಲಿ ಈ ಮೇಲಿನ ವಿಷಯಗಳನ್ನು ಚರ್ಚಿಸಲಾಯಿತು·

1· ಜಂಟಿ ಅರಣ್ಯ ಯೋಜನೆ ಉತ್ತರ ಕನ್ನಡ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಅನುಬಂಧ·

ಈ ವಿಷಯವನ್ನು ಚರ್ಚೆಗೆ ಎತ್ತಿಕೊಂಡ ~~ಸದಸ್ಯರೂ~~ ಅಧ್ಯಕ್ಷರು ವಿ·ಎಫ್·ಸಿ· ಯೋಜನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮಹತ್ವವಾದದ್ದು, ಇದನ್ನು ಕಾರ್ಯರೂಪಗೊಳಿಸುವಲ್ಲಿ ಪ್ರತಿ ಸ್ವಯಂ ಸೇವಾ ಸಂಸ್ಥೆಗಳ ವಿಚಾರವನ್ನು ತಿಳಿಯಬಯಸಿದಾಗ ಶ್ರೀ ಅಪಾರವರು ಈ ಯೋಜನೆಯು ನಿಜವಾಗಿ ಯಶಸ್ವಿಯಾಗಲು ಅರಣ್ಯ ಇಲಾಖೆ, ಸ್ವಯಂ ಸೇವಾ ಸಂಸ್ಥೆಗಳು ಮತ್ತು ವಿ·ಎಫ್·ಸಿ· ಇವರು ಕೂಡಿ ಕೆಲಸ ಮಾಡಬೇಕು· ಅದಕ್ಕೆ ಹೆಚ್ಚಿನ ಕಡೆಗಳಲ್ಲಿ ತೊಂದರೆ ಇರುವುದು ಗಮನಕ್ಕೆ ಬಂದಿದೆ· ಅನೇಕ ಕಡೆಗಳಲ್ಲಿ ಅರಣ್ಯ ಇಲಾಖೆಯು ಸ್ವಯಂ ಸೇವಾ ಸಂಸ್ಥೆಗಳನ್ನು ಭಾಗವಹಿಸುವಂತೆ ಮಾಡಲು ಅಧಿಕೃತ ಪತ್ರ ನೀಡಿಲ್ಲ· ಇದರಿಂದಾಗಿ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳೂ ಸಹ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಲು ಹಿಂಜರಿಯುತ್ತಿದ್ದಾರೆ ಎಂದರು· ಈ ಬಗ್ಗೆ ಶಿವಪ್ಪ ಪೂಜಾರಿಯವರು ಮುಂದುವರಿಸಿ ಗ್ರಾಮ ಅರಣ್ಯ ಸಮಿತಿಗಳು ರಚನೆಯಾಗಿದ್ದರೂ ಸಹ ಮುಖ್ಯ ಪಾತ್ರ ವಹಿಸಬೇಕಾದಂತಹ ಅರಣ್ಯ ಸಮಿತಿಗೆ ಮತ್ತು ಸದಸ್ಯರಿಗೆ ಸರ್ಕಾರಿ ಆದೇಶದ ಮಾಹಿತಿಯಾಗಲಿ, ಗ್ರಾಮ ಅರಣ್ಯ ಸಮಿತಿಯ ಆಡಳಿತ ವಿಚಾರದ ಬಗೆಯಾಗಲಿ, ಯಾವುದೇ ತರಬೇತಿಯನ್ನು ನೀಡದೆ ಇರುವುದರಿಂದ ಗ್ರಾಮ ಅರಣ್ಯ ಸಮಿತಿಯ ಅಸ್ತಿತ್ವ ಆಸಕ್ತಿಯನ್ನು ಕಳೆದುಕೊಂಡಿದೆ·ಎಂದು ಅಭಿಪ್ರಾಯ ವ್ಯಕ್ತಪಡಿಸಿ, ಈ ಯೋಜನೆ ಬಗ್ಗೆ ವಿ·ಎಫ್·ಸಿ· ಸಮಿತಿಗೆ ಹೆಚ್ಚಿನ ತರಬೇತಿಯನ್ನು ಒದಗಿಸುವ ಮಹತ್ವವನ್ನು ಒತ್ತಿ ಹೇಳಿದರು· ಈ ಯೋಜನೆಯ ಬಗ್ಗೆ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ನಿರ್ಣಯಕವಾಗಿ ಜಾರಿಗೊಳಿಸಲು ಒಕ್ಕೂಟದ ವತಿಯಿಂದ ವಿ·ಎಫ್·ಸಿ· ಗಳಿಗೆ ತರಬೇತಿಯನ್ನು ಕೊಡುವುದು ಮತ್ತು ವಿ·ಎಫ್·ಸಿ·ಯವರೇ ಅರಣ್ಯ ಇಲಾಖೆಗೆ ಸ್ವಯಂ ಸೇವಾ ಸಂಸ್ಥೆಗಳನ್ನು ವಿ·ಎಫ್·ಸಿ·ಯೊಂದಿಗೆ ಸೇರಿಸಲು ಪತ್ರ ಬರೆಯುವಂತೆ ಮಾಡುವದೆಂದು ತೀರ್ಮಾನಿಸಲಾಯಿತು·

2. ಕೆ ಎಫ್.ಡಿ.ಸಿ. ಗೆ ಕೆ.ಎಫ್.ಡಿ. ಯಿಂದ ಅರಣ್ಯ ಮಂಜೂರಿ ಮಾಹಿತಿಗಳು.

ಪ್ರತಿಭಾ ಮುಂಡರಗಿಯವರು ತಮ್ಮ ಕಾರ್ಯಕ್ಷೇತ್ರದಲ್ಲಿ ಈ ವಿಷಯದಿಂದ ಆಗುತ್ತಿರುವ ಅನಾನುಕೂಲತೆಗಳಿಂದಾಗಿ ಕೆ.ಎಫ್.ಡಿ. ಯವರು ಕೆ.ಎಫ್.ಡಿ.ಸಿ.ಗೆ ಕೊಟ್ಟಿರುವ ಅರಣ್ಯ ಭೂಮಿಯ ವಿವರಗಳಿಗಾಗಿ ಅರಣ್ಯ ಇಲಾಖೆಯೊಂದಿಗೆ ಹಲವಾರು ಬಾರಿ ಪತ್ರವ್ಯವಹಾರ ವನ್ನು ಮಾಡಿರುತ್ತಾರೆ. ಈಗ ಅವರಿಗೆ ಹಳಿಯಾಳ ಡಿವಿಜನ್‌ನ ಮಾಹಿತಿ ಸಿಕ್ಕಿರುವ ಬಗ್ಗೆ ಸಭೆಗೆ ವಿವರಿಸಿದರು. ಹಾಗು ಸಭೆಯಲ್ಲಿ ಕೆನರಾ ಸರ್ಕಲ್‌ನಲ್ಲ ಈ ಭೂಮಿ ಮಂಜೂರಿ ಬಗೆಗಿನ ಎಲ್ಲಾ ಮಾಹಿತಿಗಳನ್ನು ಸಿ.ಎಫ್. ಮುಖಾಂತರ ಪಡೆಯಬೇಕೆಂದು ತೀರ್ಮಾನಿಸಲಾಯಿತಲ್ಲದೆ, ಸದ್ರಿ ಜಮೀನುಗಳನ್ನು ಅಂತೂ ಡಿವಿಜನ್‌ಗಳಲ್ಲಿ ವಿ.ಎಫ್.ಸಿ. ಗಳಿಗೆ ಹಸ್ತಾಂತರಿಸಲು ಪೊಲಿಸಿ ಮಾಡುವಂತೆ ಸ್ಟೀರಿಂಗ್ ಕಮಿಟಿಯಲ್ಲಿ ಚರ್ಚಿಸಲು ಕ್ರಮಕೈಗೊಳ್ಳಬೇಕೆಂದು ಅಭಿಪ್ರಾಯಪಡಲಾಯಿತು.

3. ವಿ.ಎಫ್.ಸಿ. ಸದಸ್ಯರಿಂದ ಅನುಭವ ಹಂಚಿಕೆ.

ಈ ಸಭೆಯಲ್ಲಿ ಬೆಳಗೇರಿ ವಿ.ಎಫ್.ಸಿ. ಯ ಅಧ್ಯಕ್ಷರಾದ ರಮೇಶರವರು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ, ನಮ್ಮಲ್ಲಿ ಪ್ಲಾಂಟೇಶನ್ ಮಾಡಿದ ನಂತರ ವಿ.ಎಫ್.ಸಿ. ಮಾಡಿರುತ್ತಾರೆ. ನಮ್ಮಿಂದ ಕೆಲವು ಮಾಹಿತಿಗಳನ್ನು ತೆಗೆದುಕೊಂಡು ಪ್ಲಾನ್ ಮಾಡಿದ್ದಾರೆ. ಆದರೆ ಅವುಗಳ ಬಗ್ಗೆ 'ಏನಾಯಿತು ಎಂದು ನಮಗೆ ಮಾಹಿತಿ ಇಲ್ಲ. ನಮಗೆ ವಿ.ಎಫ್.ಸಿ. ಎಂದರೆ 'ಏನು ಎನ್ನುವ ಬಗ್ಗೆ ಹೆಚ್ಚಿನ ವಿಚಾರಗಳು ತಿಳಿಯುತ್ತಿಲ್ಲ. ಮೀಟಿಂಗಗಳು ಆಗುತ್ತಾ ಇಲ್ಲ. ಕೂಲಿ ಕಡಿಮೆ ಕೊಡುತ್ತಾರೆ. ರಕ್ಷಣೆಯ ವಿಚಾರದಲ್ಲಿ ಮಾತ್ರ ಜನ ಜವಾಬ್ದಾರಿ ತೆಗೆದುಕೊಳ್ಳಬೇಕೆಂದು ಇಲಾಖೆಯವರು ಒತ್ತಾಯ ಮಾಡುತ್ತಿದ್ದಾರೆಂದು ತಿಳಿಸಿದರು. ವಿ.ಎಫ್.ಸಿ. ಅಧ್ಯಕ್ಷರಾದ ನಾಗು ಜನ್ನು ತೋರತೆ ಗಾಳಿ ಉಡಗೇರಿಯವರು ಮಾತನಾಡಿ ಇಲಾಖೆಯವರು ಮಾಡಿದ ಕೆಲಸದ ಖರ್ಚು ವಿಚಾರಗಳು ನಮಗೆ ಗೊತ್ತಾದಿಲ್ಲ. ನಮ್ಮದು ಹೊಸತಾಗಿ ಹುಲ್ಲು ಬೆಳೆಸಲು ಪಶುಸಂಗೋಪನಾ ಇಲಾಖೆಯ ಸಹಾಯದಿಂದ ಅರಣ್ಯ ಇಲಾಖೆಯೊಂದಿಗೆ ಗ್ರಾಮ ಅರಣ್ಯ ಸಮಿತಿಯ ರಚನೆಯಾಗಿದ್ದು ಇಲ್ಲಿ ಪಶುಸಂಗೋಪನೆ ಇಲಾಖೆಯವರು ಜನರ ತೀರ್ಮಾನಕ್ಕೆ ಬಿಡದೆಯೇ ಖರ್ಚು ವೆಚ್ಚದಲ್ಲಿ ತೊಂದರೆ ಮಾಡಿದ್ದಾರೆಂದು ತಿಳಿಸಿದರು.

4. ವಿ.ಎಫ್.ಸಿ. ಯನ್ನು ಬಲಗೊಳಿಸುವ ವಿಚಾಂಗಳು.

ಸಂಯುಕ್ತ ಅರಣ್ಯ ಯೋಜನೆಯ ಮೂಲ ಅಂಗವಾದ ವಿ.ಎಫ್.ಸಿ. ಗಳಲ್ಲಿ ಹೆಚ್ಚಿನ ಆಸಕ್ತಿ ಕಾಣದೆ ಇರುವುದು ಗೋಚರವಾಗುತ್ತಿದೆ. ಆದುದರಿಂದ ಇವುಗಳನ್ನು ಬಲಗೊಳಿಸಲು ವಿ.ಎಫ್.ಸಿ. ಯಲ್ಲಿ ಎನ್.ಜಿ.ಒ. ಗಳು ಸದಸ್ಯರೆಂದು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ವಿ.ಎಫ್.ಸಿ. ಯ ಮೀಟಿಂಗಗಳನ್ನು ಎನ್.ಜಿ.ಒ. ರವರು ~~ಸೇರಿಕೊಂಡು ಮುಂಚಿತವಾಗಿ ಮೀಟಿಂಗ ಮಾಡಿ ಜನರ ಅವಶ್ಯಕತೆಗಳನ್ನು ಚರ್ಚಿಸಿ~~, ನಂತರ ಅರಣ್ಯ ಇಲಾಖೆಯವರೊಂದಿಗೆ ವಿ.ಎಫ್.ಸಿ. ಮೀಟಿಂಗ ಮಾಡುವುದು ಸೂಕ್ತ. ಕಡ್ಡಾಯವಾಗಿ ಪ್ರತಿ ತಿಂಗಳು ವಿ.ಎಫ್.ಸಿ. ಮೀಟಿಂಗ ಮಾಡುವ ಹಾಗೆ ಇಲಾಖೆಗೆ ಸಮಿತಿಯವರು ಕೇಳಿಕೊಳ್ಳಬೇಕು ವಿ.ಎಫ್.ಸಿ. ಯ ಜಂಟಿ ಖಾತೆಯನ್ನು ತ್ವರಿತವಾಗಿ ಮಾಡುವಂತೆ ಆಗಬೇಕು. ಎಮ್.ಒ.ಯು.

ಸಹಿ ಮಾಡುವ ಮೊದಲೆ ಸಮಿತಿಯವರಿಗೆ ವಿವರವಾಗಿ ತಿಳಿಸಬೇಕು ಮತ್ತು ಇದು ಆದಷ್ಟು ಬೇಗ ಆಗಬೇಕು. ವಿ.ಎಫ್.ಸಿ. ಸದಸ್ಯರು ತಮ್ಮೊಳಗೆ ಸಂಘಟನೆಯನ್ನು ಬಲಗೊಳಿಸಲು ತರಬೇತಿಗೆ ಅವಕಾಶ ಮಾಡಿಕೊಳ್ಳಬೇಕು. ವಿ.ಎಫ್.ಸಿ. ಕಾರ್ಯಕ್ಷೇತ್ರದ ಜನರೆ ಕೂಲಿ ಮತ್ತು ವಾಜಿ ಮೆನೆ ಆಗಿ ಕಾರ್ಯ ಮಾಡಲು ಕ್ರಮಕೈಗೊಳ್ಳಬೇಕು. ವಿ.ಎಫ್.ಸಿ. ಗಳಲ್ಲಿ ದಾಖಲೆ ಪತ್ರಗಳನ್ನು ತಯಾರಿಸಿ ಇಟ್ಟುಕೊಳ್ಳುವುದು ಸದಸ್ಯರಿಗೆ ಸರಿಯಾದ ಮಾಹಿತಿ ದೊರೆಯುವಂತೆ ಆಗಬೇಕೆಂದು ಸಭೆಯು ಚರ್ಚಿಸಿತು.

5. <u>ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ತರಬೇತಿಯ ಅವಶ್ಯಕತೆ.</u>

ಉತ್ತರ ಕನ್ನಡ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳ ಕೋರ್ಡಿನೇಶನ ಕಮಿಟಿಯ ಮೀಟಿಂಗನಲ್ಲಿ ಚರ್ಚಿಸಿದಂತೆ ಅಪಾರವರು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ಮುಂದಕ್ಕೆ ತರಬೇತಿಯನ್ನು ಹಮ್ಮಿಕೊಳ್ಳುವ ಬಗ್ಗೆ ತೀರ್ಮಾನವಾಗಬೇಕೆಂದರು. ಈ ಬಗ್ಗೆ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ಸಾಕಷ್ಟು ತರಬೇತಿಗಳಾಗಿದ್ದು, ವಿ.ಎಫ್.ಸಿ ಸದಸ್ಯರಿಗೆ ಹೆಚ್ಚಿನ ತರಬೇತಿ ನೀಡುವುದು ಯೋಗ್ಯವೆಂದು ಅಭಿಪ್ರಾಯ ಕೊಡಲಾಯಿತು. ಈ ಬಗ್ಗೆ ಸಭೆಯಲ್ಲಿದ್ದ ವಿ.ಎಫ್.ಸಿ. ಅಧ್ಯಕ್ಷರು ತರಬೇತಿಯ ಅವಶ್ಯಕತೆಯ ಬೇಡಿಕೆಯನ್ನು ಬಲವಾಗಿ ಸಮರ್ಥಿಸಿದರು. ಹಾಗು ಈ ತರಬೇತಿಯನ್ನು ಕೊಡಲು ಈ ಕೆಳಗಿನ ಸದಸ್ಯರ ಒಂದು ಕಮಿಟಿಯನ್ನು ಆರಿಸಲಾಯಿತು.

1. ಅಪಾ ಬೇಳೂರಕರ. 2. ಶಿವಪ್ಪಾ ಪೂಜಾರಿ. 3. ಶೀಲಾ ಖರೆ.
4. ಜೊಸೆಫ ವಾಜ. 5. ಪ್ರತಿಭಾ ಮುಂಡರಗಿ. 6. ವಿದ್ಯಾಧರ ಗಾಡ್ಗೀಳ.

ಈ ಕಮಿಟಿಯು ತಾರೀಖ 1-12-94 ರಂದು 11-00 ಗಂಟೆಗೆ ಒಕ್ಕೂಟದ ಸಂಯೋಜಕರ ಸಂಯೋಜನೆಯೊಂದಿಗೆ ಮೈರಾಡಾ ಸಂಸ್ಥೆಯ ಅಧಿಕಾರಿಗಳನ್ನು ಸೇರಿಸಿ ಸಭೆ ನಡೆಸ ತರಬೇತಿಯ ರೂಪರೇಶೆಗಳನ್ನು ಯೋಜಿಸುವುದೆಂದು ತೀರ್ಮಾನಿಸಲಾಯಿತು.

6. ವಿಭಾಗ ಮಟ್ಟದ ಅರಣ್ಯಾಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ವಿ.ಎಫ್.ಸಿ. ಸಮಿತಿಯ ಮೀಟಿಂಗ ಕರೆಯುವುದು.

ಈ ಬಗ್ಗೆ ಒಕ್ಕೂಟದ ಕೋರ್ಡಿನೇಶನ ಕಮಿಟಿಯಲ್ಲಿ ಚರ್ಚೆಯಾಗಿದ್ದ ವಿಷಯವನ್ನು ಅಪಾರವರು ಸಭೆಗೆ ತಿಳಿಸಿ, ವಿ.ಎಫ್.ಸಿ. ಯವರು ಜಿ.ಓ. ಮತ್ತು ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಎರಡು ದಿನದ ವರ್ಕಶೋಪನ್ನು ಕರೆಯಬೇಕೆಂದು ತೀರ್ಮಾನಿಸಿದ್ದಾಗಿ ಹೇಳಿದರು. ಈ ಬಗ್ಗೆ ಅರಣ್ಯ ಸಂರಕ್ಷಣಾಧಿಕಾರಿಗಳಲ್ಲಿ ಚರ್ಚೆ ಮಾಡಿ ತೀರ್ಮಾನಿಸುವುದಾಗಿ ಮೈರಾಡಾದವರು ಒಪ್ಪಿಕೊಂಡಿದ್ದಾರೆಂದು ತಿಳಿಸಿದರು. ಹಾಗು ವಿಭಾಗ ಮಟ್ಟದ ವಿ.ಎಫ್.ಸಿ. ಸದಸ್ಯರು ಎನ್.ಜಿ.ಓ. ಗಳು ಮತ್ತು ಅರಣ್ಯ ಇಲಾಖೆಯವರು ಸೇರಿ ಮೀಟಿಂಗ ಮಾಡುವುದನ್ನು ಸಹ ವ್ಯವಸ್ಥೆಗೊಳಿಸುವುದು ಮೈರಾಡಾದವರದೇ ಜವಾಬ್ದಾರಿಯಾಗಿದ್ದು ಈ ಬಗ್ಗೆ ಒಕ್ಕೂಟದಿಂದ ಮೈರಾಡಾದವರಿಗೆ ಪತ್ರ ಬರೆಯಬೇಕೆಂದು ತೀರ್ಮಾನಿಸಲಾಯಿತು.

7. ವಿ.ಎಫ್.ಸಿ. ಮೈಕ್ರೋಪ್ಲಾನಿಂಗ.

ಒಟ್ಟಾರೆಯಾಗಿ ಗ್ರಾಮ ಅರಣ್ಯ ಸಮಿತಿಗಳಲ್ಲಿ ಆದಂತಹ ಮೈಕ್ರೋಪ್ಲಾನಿಂಗ
ಗಗಳ ವಿವರಗಳನ್ನು ಜನರಿಗೆ ವಿವರವಾಗಿ ತಲುಪಿಸುವುದು. ಹೊನ್ನೆಬೈಲ ಗ್ರಾಮ ಅರಣ್ಯ
ಸಮಿತಿಯ ಮೈಕ್ರೋಪ್ಲಾನಿಂಗಳನ್ನು ಅಭ್ಯಸಿಸುವುದು, ಹಳಕಾರ ಗ್ರಾಮ ಅರಣ್ಯ
ಸಮಿತಿಯ ಮೈಕ್ರೋಪ್ಲಾನಿಂಗ ವರದಿಯನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ
ತಲುಪಿಸುವುದು, ಪ್ಲಾಂಟೇಶನ ಮಾಡದೆನೆ ನೈಸರ್ಗಿಕವಾಗಿ ಕಾಡಿನ ರಕ್ಷಣೆ ಮಾಡುವುದರ
ಮೂಲಕ ಜೈವಿಕತೆಯನ್ನು ಕಾಪಾಡುವ ವಿಚಾರದಲ್ಲಿ ಪರಸ್ಪರ ಚರ್ಚೆಯನ್ನು ಮಾಡಲಾಯಿತು

8. ಕೆನರಾ ಸರ್ಕಲಿನ ಕನ್ಸರ್ವೇಟಿವ ಭೇಟಿ.

ಅರಣ್ಯ ಸಂರಕ್ಷಣಾಧಿಕಾರಿಗಳು ಹೊಸದಾಗಿ ವರ್ಗಾವಣೆಗೊಂಡು ಇಲ್ಲಿಗೆ
ಬಂದಿದ್ದು, ಅವರ ಜೊತೆ ಸ್ವಯಂ ಸೇವಾ ಸಂಸ್ಥೆಗಳವರು ಸಂಯುಕ್ತ ಅರಣ್ಯ ಯೋಜನೆ
ಮತ್ತು ನಿರ್ವಹಣೆಯವಿಷಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೆ ಇರುವ ಸಮಸ್ಯೆಗಳನ್ನು
ಚರ್ಚಿಸುವುದರ ಸಲುವಾಗಿ ಮೀಟಿಂಗನ್ನು ವ್ಯವಸ್ಥೆಗೊಳಿಸಲು ತೀರ್ಮಾನಿಸಿದಂತೆ ನವೆಂಬರ
ಅಥವಾ ಡಿಸೆಂಬರದಲ್ಲಿ ಅರಣ್ಯ ಸಂರಕ್ಷಣಾಧಿಕಾರಿಗಳೊಡನೆ ಸಮಯ ತೆಗೆದುಕೊಂಡು ತಿಳಿಸುವುದಾಗಿ
ವಿದ್ಯಾಧರ ಗಾಡ್ಗೀಳರವರು ಜವಾಬ್ದಾರಿ ತೆಗೆದುಕೊಂಡರು.

9. ಕಳೆದ ಸಭೆಯ ವರದಿಯನ್ನು ಕಳಿಸುವ ಬಗ್ಗೆ.

ಒಕ್ಕೂಟದ ಕೆಲವು ಸದಸ್ಯರಿಗೆ ಕಳೆದ ಸಭೆಯ ವರದಿ ತಲುಪದೆ ಇರುವುದರಿಂದ
ಇದನ್ನು ಕಳಿಸಿಕೊಡಬೇಕೆಂದು ಸಭೆಯಲ್ಲಿ ಸಂಘಟಕರಿಗೆ ತಿಳಿಸಲಾಯಿತು. ಅಲ್ಲದೆ
ಒಕ್ಕೂಟದ ತರಬೇತಿ ಕೋಡ್ಡಿನೇಶನ ಕಮಿಟಿಯ ಸಭೆಯ ವರದಿಯನ್ನು ಸಹ ಇನ್ನು
ಮುಂದೆ ಒಕ್ಕೂಟದ ಸದಸ್ಯರಿಗೆ ಕಳುಹಿಸಿಕೊಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

10. ಗಿರಿ ಜನಾಂಗಕ್ಕೆ ಕಿರು ಅರಣ್ಯ ಉತ್ಪನ್ನಗಳ ಹಕ್ಕಿನ ಬಗ್ಗೆ.

ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಗಿರಿ ಜನಾಂಗಗಳಿಗೆ ಕಿರು ಅರಣ್ಯ
ಉತ್ಪತ್ತಿಗಳಾದ ಸೀಗೆಕಾಯಿ, ಜೇನು, ಪತ್ರ ಇತ್ಯಾದಿಗಳನ್ನು ಉಚಿತವಾಗಿ ಸಂಗ್ರಹಿಸಲು ಹಕ್ಕು
ಕೊಡಬೇಕೆಂದು ಯಲ್ಲಾಪುರದ ಸಿದ್ದಿ ಪ್ರೊಜೆಕ್ಟನವರು ಕೆಲವು ವರ್ಷಗಳಿಂದ ಅರಣ್ಯ
ಇಲಾಖೆಯವರೊಂದಿಗೆ ಚರ್ಚಿಸುತ್ತಿದ್ದು, ಇಲಾಖೆ ಈ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸಿ
ಈಗ ಮತ್ತೆ ಅದನ್ನು ವಿಫಲಗೊಳಿಸುವ ಸಂಚು ನಡೆಯುತ್ತಿದೆಯೆಂದು ಶಿವಪ್ಪ ಪೂಜಾರಿ-
ಯವರು ತಿಳಿಸಿ, ಇದನ್ನು ವಿರೋಧಿಸಲು ಕೈಗೊಳ್ಳಬೇಕಾದ ಯೋಜನೆಯನ್ನು ಸಭೆಯ
ಮುಂದಿಟ್ಟರು. ಎಲ್ಲಾ ಒಕ್ಕೂಟದ ಪ್ರತಿನಿಧಿಗಳ ಸಹಕಾರವನ್ನು ಕೋರಿದರು. ಈ
ಹೋರಾಟದ ರೂಪರೇಶೆಗಳನ್ನು ಪ್ರತಿನಿಧಿಗಳಿಗೆ ಲಿಖಿತವಾಗಿ ನೀಡಬೇಕು ಮತ್ತು ತಮ್ಮೆಲ್ಲರ
ಸಹಕಾರವು ಅಗತ್ಯವಾಗಿ ಸಿಗುವುದೆಂದು ಸಭೆಯು ಭರವಸೆಯನ್ನು ನೀಡಿತು.

11. <u>ಎಗ್ಜಿಬ್ಯುಶನ ಬಗ್ಗೆ.</u>

ಉತ್ತರ ಕನ್ನಡ ಜಿಲ್ಲೆಯ ಗಿರಿ ಜನರ ನಾಡಿಮಿಡಿತವನ್ನು ಬಲ್ಲ ಆಕ್ಸಫಾಮ ಶ್ರೀ ಗೋಪಿಕೃಷ್ಣನವರು ಬೆಂಗಳೂರಿನಲ್ಲಿ 1995 ರ ಜನವರಿ 5 ರಿಂದ 8 ರವರೆಗೆ ಗಿರಿ ಜನರ ಕರಕುಶಲ ವಸ್ತು ಪ್ರದರ್ಶನವನ್ನು ಅರಣ್ಯ ಇಲಾಖೆಯ ಕರಕುಶಲ ವಸ್ತು ಇಲಾಖೆ ಮತ್ತು ರೀಜನಲ ತರಬೇತಿ ಸಂಸ್ಥೆ ಸಂಸಂಯೋಗದೊಂದಿಗೆ 'ಏರ್ಪಡಿಸಿದ ವಿಚಾರವಾಗಿ ಸಭೆಗೆ ವಿವರವಾಗಿ ತಿಳಿಸಿದರು. ಅಲ್ಲದೆ ವಿವಿಧ ಸಂಘ ಸಂಸ್ಥೆಗಳಿಂದ ಸಹಕಾರವನ್ನು ಬಯಸಿದ ಅವರು ಗಿರಿ ಜನರಿಗೆ ಕಾಡಿನ ಕಿರು ಉತ್ಪನ್ನಗಳಿಂದ ತಯಾರಿಸಿದ ಕರಕುಶಲ ವಸ್ತುಗಳಿಗೆ ಹೇಗೆ ಹೆಚ್ಚಿಗೆ ಬೆಲೆಯನ್ನು ಮಾಡಬಹುದೆಂದು ತೋರಿಸಿಕೊಡುವುದು ಇದರ ಮೂಲ ಉದ್ದೇಶವೆಂದು ತಿಳಿಸಿದರು. ಜೊತೆಗೆ ವಿವಿಧ ಕರಕುಶಲ ವಸ್ತುಗಳ ಸಂಗ್ರಹಕ್ಕೆ ಸಹಕರಿಸುವಂತ ಪ್ರತಿನಿಧಿಗಳನ್ನು ಕೇಳಿಕೊಂಡರು.

12. <u>ರೀವೀವ ಮಿಶನನ ಭೇಟಿ.</u>

ಒ.ಡಿ.ಎ. ದಿಂದ ನವೆಂಬರ ತಿಂಗಳಲ್ಲಿ ಸಂಯುಕ್ತ ಅರಣ್ಯ ಯೋಜನೆ ರೀವೀವ ಮಾಡಲು ಉತ್ತರ ಕನ್ನಡ ಜಿಲ್ಲೆಗೆ ನಿಯೋಗ ಬರಲಿದ್ದು, ಇವರ ಜೊತೆ ಒಕ್ಕೂಟಕ್ಕೆ ಚರ್ಚಿಸಲು ಅವಕಾಶ ಆಗಬೇಕು ಹಾಗು ಅವರು ಬರುವ ಮಾಹಿತಿಗಳನ್ನು ತಿಳಿಸಬೇಕೆಂದು ಶ್ರೀ ವಿದ್ಯಾಧರ ಗಾಡ್ಗೀಳರವರಿಗೆ ಸಭೆಯು ಕೇಳಿಕೊಂಡಂತೆ ಅವರು ಒಪ್ಪಿಕೊಂಡರು.

ಒಕ್ಕೂಟದ ಮುಂದಿನ ಮೀಟಿಂಗನ್ನು 13-1-1995 ರಂದು ಪ್ರಗತಿ ವನಿತಾ ಸಮಾಜದ ವತಿಯಿಂದ ಅಂಕೋಲಾದಲ್ಲಿ ನಡೆಸುವುದೆಂದು ಸಭೆಯು ತೀರ್ಮಾನಿಸಲು ಸಂಸ್ಥೆಯ ಶಶಿಕಲಾ ನಾಯಕರವರು ಸಹಕರಿಸಿದರು.

ಈ ಸಭೆಯಲ್ಲಿ ಶೀಲಾ ಖರೆ, ಗಣೇಶ ಶೆಟ್ಟಿ, ರಾಜಗೋಪಾಲ ಶೆಟ್ಟಿ, ಪಾಂಡುರಂಗ ಹೆಗಡೆ, ಸಾವಿತ್ರಿ ಬಾಂದೇಕರ, ಡಿಯೋಗ ಬಸ್ತ್ಯಾಂವ ಸಿದ್ದಿ, ಜೊಸೆಫ ವಾಜ, ಇವರೆಲ್ಲರೂ ಸಭೆಯಲ್ಲಿ ಪೂರಕವಾದ ಮಾಹಿತಿ ಮತ್ತು ಸಲಹೆಗಳನ್ನು ಕೊಡುವಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಿದರು.

ಸಭೆಯ ಮೌಲ್ಯಮಾಪನದ ನಂತರ ಶ್ರೀ ರಾಜಗೋಪಾಲರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಗಿಸಲಾಯಿತು.

ಧನ್ಯವಾದಗಳೊಂದಿಗೆ,

ತಾರೀಖ:

ಸ್ಥಳ: ಯಲ್ಲಾಪುರ.

ವರದಿ :

ಸಾವಿತ್ರಿ ಬಾಂದೇಕರ,

ಡೀಡ್ಸ ಗೌಳಿ ಪ್ರೊಜೆಕ್ಟ ಯಲ್ಲಾಪುರ.

ಸಹಾಯ: ಶಿವಪ್ಪ ಪೂಜಾರಿ,

ಸಿದ್ದಿ ಪ್ರೊಜೆಕ್ಟ ಯಲ್ಲಾಪುರ.